# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 324 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಪಿ. ಸುಧಾಮ್ ದಾಸ್ |
| ಉತ್ತರಿಸುವ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2020-21 ಹಾಗೂ 2021-22ನೇ ಸಾಲಿನಲ್ಲಿ ನಡೆದಿರುವ ಬೃಹತ್ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿ.ಐ.ಡಿ. ತನಿಖಾ ವರದಿಯಲ್ಲಿ ಹೆಸರಿಸಲಾದ ಆರೋಪಿಗಳು ಯಾರು; (ಹೆಸರು, ಹುದ್ದೆ ಹಾಗೂ ಅವ್ಯವಹಾರಕ್ಕೆ ಸಂಬಂಧಿಸಿದಂತೆ, ದುರ್ಬಳಕೆಗೊಂಡ ಸರ್ಕಾರದ ಒಟ್ಟು ಹಣದ ವಿವರ ಒದಗಿಸುವುದು)</td><td>ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2021-22 ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿ.ಐ.ಡಿ ತನಿಖೆಯಲ್ಲಿ ಹೆಸರಿಸಲಾದ ಪ್ರಮುಖ ಆರೋಪಿಗಳ ವಿವರ ಈ ಕೆಳಕಂಡಂತಿದೆ.<br><table><tr><th>ಕ್ರ.ಸ</th><th>ಹೆಸರು</th><th>ಹುದ್ದೆ</th></tr><tr><td>1.</td><td>ಶ್ರೀಮತಿ ಆರ್.ಲೀಲಾವತಿ</td><td>ಹಿಂದಿನ ವ್ಯವಸ್ಥಾಪಕ ನಿರ್ದೇಶಕರು</td></tr><tr><td>2.</td><td>ಶ್ರೀ ಬಿ.ಕೆ ನಾಗರಾಜಪ್ಪ</td><td>ಹಿಂದಿನ ಪ್ರಧಾನ ವ್ಯವಸ್ಥಾಪಕರು</td></tr><tr><td>3.</td><td>ಶ್ರೀ ಪಿ.ಡಿ ಸುಬ್ಬಪ್ಪ</td><td>ಹಿಂದಿನ ಕಛೇರಿ ಅಧೀಕ್ಷಕರು</td></tr><tr><td>4.</td><td>ಶಂಕರ ಜು. ದೇವರಮನಿ</td><td>ಹಿಂದಿನ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳು, ವಿಜಯಪುರ ಜಿಲ್ಲೆ</td></tr><tr><td>5</td><td>ಶ್ರೀ ಕೆ.ಎಸ್.ನಾಗಮೂರ್ತಿ</td><td>ಹಿಂದಿನ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳು, ಕಲಬುರಗಿ ಜಿಲ್ಲೆ</td></tr></table><br>ನಿಗಮದ ಆಂತರಿಕ ಲೆಕ್ಕ ಪರಿಶೋಧಕರು ಒಟ್ಟಾರೆ ರೂ.88.74 ಕೋಟಿ ಅವ್ಯವಹಾರ ಆಗಿರುವುದಾಗಿ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.</td></tr>
<tr><td>ಆ</td><td>ದುರ್ಬಳಕೆಯಾದ ಒಟ್ಟು ಹಣದಲ್ಲಿ ಇದುವರೆಗೆ ಎಷ್ಟು ಹಣ ವಶಪಡಿಸಿಕೊಳ್ಳಲಾಗಿದೆ ಹಾಗೂ ಆಪಾದಿತರ ವಿರುದ್ಧ ಕೈಗೊಂಡಿರುವ ಕ್ರಮಗಳಾವುವು; (ವಿವರ ಒದಗಿಸುವುದು)</td><td>ದುರ್ಬಳಕೆಯಾಗಿದೆ ಎನ್ನಲಾದ ಹಣದಲ್ಲಿ ಇದುವರೆವಿಗೂ ಹಣ ವಶಪಡಿಸಿಕೊಂಡಿರುವುದಿಲ್ಲ.<br>ಆಪಾದಿತರ ವಿರುದ್ಧ ಮಾನ್ಯ ಸರ್ಕಾರವು ಆರೋಪಿತರುಗಳನ್ನು ಸೇವೆಯಿಂದ ಅಮಾನತ್ತು ಪಡಿಸಿ, ಆದೇಶ ಹೊರಡಿಸಿದ್ದು ಮತ್ತು ಅವರುಗಳ ವಿರುದ್ಧ ಮಾನ್ಯ ಲೋಕಾಯುಕ್ತ ಮತ್ತು ಸಿ.ಐ.ಡಿ ಸಂಸ್ಥೆಯಲ್ಲಿ ಪ್ರಕರಣ ತನಿಖಾ ಹಂತದಲ್ಲಿರುತ್ತದೆ.</td></tr>
<tr><td>ಇ</td><td>ಸದರಿ ಅವ್ಯವಹಾರಕ್ಕೆ ಸಂಬಂಧಿಸಿದ ಆಪಾದಿತರು ಸರ್ಕಾರಿ ಸೇವೆಯಲ್ಲಿ ಮುಂದುವರೆದಿದ್ದಾರೆಯೇ; ಮುಂದುವರೆದಿದ್ದ ಪಕ್ಷದಲ್ಲಿ ಅವರ ಹೆಸರು ಹಾಗೂ ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಇಲಾಖೆ ಹಾಗೂ ಹುದ್ದೆಯ ವಿವರ ಒದಗಿಸುವುದು;</td><td>ಸದರಿ ಅವ್ಯವಹಾರಕ್ಕೆ ಸಂಬಂಧಿಸಿದ ಆಪಾದಿತರುಗಳು ಸೇವೆಯಲ್ಲಿ ಮುಂದುವರೆದ/ನಿವೃತ್ತರಾದ/ವರ್ಗಾವಣೆಗೊಂಡ ಅಧಿಕಾರಿಗಳ ವಿವರ ಈ ಕೆಳಕಂಡಂತಿದೆ.<br><table><tr><th>ಕ್ರ.ಸ</th><th>ಹೆಸರು</th><th>ವಿವರ</th></tr><tr><td>1.</td><td>ಶ್ರೀಮತಿ ಆರ್.ಲೀಲಾವತಿ</td><td>ವಯೋನಿವೃತ್ತಿ ಹೊಂದಿರುತ್ತಾರೆ.</td></tr><tr><td>2.</td><td>ಶ್ರೀ ಬಿ.ಕೆ ನಾಗರಾಜಪ್ಪ</td><td>ದಿನಾಂಕ:-01-07-2022 ರಂದು ನಿಗಮದ ಸೇವೆಯಿಂದ ಬಿಡುಗಡೆ ಹೊಂದಿರುತ್ತಾರೆ. ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗಕ್ಕೆ ಇವರ ವರ್ಗಾವಣೆಯಾಗಿರುತ್ತದೆ.</td></tr><tr><td>3.</td><td>ಶ್ರೀ ಪಿ.ಡಿ ಸುಬ್ಬಪ್ಪ</td><td>ವಯೋನಿವೃತ್ತಿ ಹೊಂದಿರುತ್ತಾರೆ.</td></tr><tr><td>4.</td><td>ಶಂಕರ ಜು. ದೇವರಮನಿ</td><td>ಪ್ರಸ್ತುತ ಪ್ರೌಢ ಶಾಲಾ ಶಿಕ್ಷಕರು, ಮಿಣಜಗಿ, ವಿಜಯಪುರ ಜಿಲ್ಲೆ</td></tr><tr><td>5</td><td>ಶ್ರೀ ಕೆ.ಎಸ್. ನಾಗಮೂರ್ತಿ</td><td>ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ, ಕಲಬುರಗಿ ಜಿಲ್ಲೆ</td></tr></table></td></tr>
</table>

| | | |
|---|---|---|
| ಈ | ಪ್ರಸ್ತುತ ಸಾಲಿನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ ಒದಗಿಸಲಾಗಿರುವ ಒಟ್ಟು ಹಣ ಎಷ್ಟು ಹಾಗೂ ಅವ್ಯವಹಾರ/ದುರ್ಬಳಕೆ ತಡೆಯುವ ಸಂಬಂಧ ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮಗಳು ಯಾವುವು? (ವಿವರ ಒದಗಿಸುವುದು) | ಪ್ರಸ್ತುತ 2024-25 ನೇ ಸಾಲಿನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಕ್ಕೆ ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಟಾನಕ್ಕಾಗಿ ಒಟ್ಟಾರೆ ರೂ.65.00 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.<br><br>ಅವ್ಯವಹಾರ/ದುರ್ಬಳಕೆ ತಡೆಯುವ ಸಂಬಂಧ ಸರ್ಕಾರದಿಂದ ನಿಗಮದ ಹೆಸರಿನಲ್ಲಿರುವ ಎಲ್ಲಾ ಬ್ಯಾಂಕ್ ಶಾಖೆಗಳಲ್ಲಿ ಲಭ್ಯವಿರುವ ಹಣವನ್ನು ಖಜಾನೆಯಲ್ಲಿನ ಪಿ.ಡಿ ಖಾತೆಗೆ ವರ್ಗಾಯಿಸಿ ನಿಗಮದ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಇನ್ನು ಮುಂದೆ ನಿಗಮದ ಹಣಕಾಸಿನ ವಹಿವಾಟನ್ನು ಖಜಾನೆಯ ಪಿ.ಡಿ ಖಾತೆಯಿಂದಲೇ ನಿರ್ವಹಿಸಲು ಕ್ರಮವಹಿಸಲಾಗುತ್ತಿದೆ. |

**ಸಕಇ 223 ಎಸ್‌ಎಲ್‌ಪಿ 2024**

**(ಡಾ:,ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**